೪) ಸೇಡಂ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಲ್ಲಿ ನಡೆದಿರುವ ಅವ್ಯವಹಾರವನ್ನು ತಡೆಗಟ್ಟುವುದು.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ).—ಮಾನ್ಯ ಅಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಿಗಾವ ಪುಂಧೋಳ ಸಮೀಪ ಕೊತ್ತಪಲ್ಲಿ, ಕೋನಾಪೂರ ಹಾಗೂ ತಾಲ್ಲೂಕಿನ ಬಹುತೇಕ ಗ್ರಾಮಗಳಲ್ಲಿ ಆಹಾರ ಧಾನ್ಯ ಇತ್ಯಾದಿಗಳನ್ನು ಸಮಗ್ರ ಬಾಲವಿಕಾಸ ಯೋಜನಾಧಿಕಾರಿ ಸೇಡಂ ಇವರ ಹೆಸ್ಕ್ಷೇಪದಿಂದ ಅವ್ಯವಹಾರವಾಗಿ ಮುಕ್ಕಳಿಗೆ ಅನ್ಯಾಯವಾಗುತ್ತಿರುವ ಬಗ್ಗೆ ಹಾಗೂ ಅಂಗನವಾಡಿ ಶಿಕ್ಷಕಿಯರನ್ನು ನೇಮಕಾತಿ ಮಾಡುವುದರಲ್ಲಿ ಶ್ರೀಮತಿ ಬಚ್ಚಮಗೂ ನರಸಿರೆಡ್ಡಿ ವೆಂಕಟಾಪೂರ ಶಿಕ್ಷಕಿಯಿಂದ ರೂ. ೧೫೦೦-೦೦ ಪಡೆದು ನೇಮಕಾತಿ ಮಾಡಿರುವ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). -ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ವಿಚಾರಗಳನ್ನು ಎತ್ತಿದ್ದಾರೆ ಇದನ್ನು ಸಮಾಜ ಕಲ್ಯಾಣ ಇಲಾಖೆಯ ಸಚಿವರ ಗಮನಕ್ಕೆ ತರಬಯಸುತ್ತೇನೆ.

೫. ಚಿಕ್ಕಮಂಗಳೂರಿನ ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನ ಮಾಗುಂದಿ ಹತ್ತಿರ ಭದ್ರ ನದಿಗೆ ಮೇಲ್ದರ್ಜೆ ಕಟ್ಟುವ ವಿಚಾರ

ಶ್ರೀ ಯು. ಕೆ. ಶಾಮಣ್ಣ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಬಾಳೆಹೊನ್ನೂರು ಹತ್ತಿರ ನರಸಿಂಹರಾಜಪುರ ತಾಲ್ಲೂಕಿನ ಮಾಗುಂದಿ ಹತ್ತಿರ ಭದ್ರಾನದಿಗೆ ಮೇಲುದಂಡೆ ಕಟ್ಟುವ ವಿಚಾರ ಯಾವ ಹಂತಕ್ಕೆ ಬಂದಿದೆ ಎಂಬ ವಿಚಾರ ತಿಳಿಯುಪಡಿಸಬೇಕಾಗಿರುತ್ತೆ ಎಂಬುದರ ಬಗ್ಗೆ ಮಾನ್ಯ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಮಣ್ಣನವರು ಬಾಳೆಹೊನ್ನೂರು ಮತ್ತು ಮಾಗುಂದಿ ಹತ್ತಿರ ಭದ್ರಾನದಿಗೆ ಮೇಲುದಂಡೆ ಕಟ್ಟುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಈ ಬಗ್ಗೆ ಸಮೀಕ್ಷೆ ಇಲಾಖೆಯ ಪ್ರಸ್ತಾವನೆಯಲ್ಲಿರುವುದರಿಂದ ಅವರಿಂದ ವರದಿ ಬಂದ ನಂತರ ಶೀಘ್ರವಾಗಿ ಕ್ರಮ ಕೈಗೊಳ್ಳಲಾಗುವುದೆಂದು ನಾನು ಹೇಳುತ್ತೇನೆ.

೬. ಧಾರವಾಡ ಶಹರದಲ್ಲಿ ಪ್ರಾಥಮಿಕ ೭ನೇ ತರಗತಿಯ ಪ್ರಶ್ನೆಪತ್ರಿಕೆಗಳು ಬಹಿರಂಗ ಮಾಡಿದ್ದರ ಪರಿಣಾಮವಾಗಿ ಮರುಪರೀಕ್ಷೆಗೆ ಶಿಕ್ಷಕರ ಸಂಘ ಬಹಿಷ್ಕರಿಸಿರುವುದು.

ಶ್ರೀ ಗೋಪಿನಾಥ ಆರ್. ಸಾಂದ್ರಾ.—ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ ಧಾರವಾಡ ಶಹರದಲ್ಲಿ ಪ್ರಾಥಮಿಕ ೪ನೇ ತರಗತಿಯ ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಂಡು ಸದರಿ ಪರೀಕ್ಷೆಗಳನ್ನು ದಿನಾಂಕ ೨೯-೩-೯೦ ಹಾಗೂ ೩೦-೩-೯೦ರಂದು ಪುನಃ ನಡೆಸಬೇಕೆಂದು ಧಾರವಾಡ ಜಿಲ್ಲಾ ಶಿಕ್ಷಣಾಧಿಕಾರಿಗಳು ನಿರ್ಧರಿಸಿದ್ದಾರೆಂದು ತಿಳಿದಿದೆ. ಆದರೆ ಈ ಪ್ರಶ್ನೆ ಪತ್ರಿಕೆಗಳ ಬಹಿರಂಗಕ್ಕೆ ಸಂಬಂಧವಿಲ್ಲದ ಮೂವರು ಶಾಲಾ ತನಿಖಾಧಿಕಾರಿಗಳನ್ನು ಧಾರವಾಡ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಅಮಾನತ್ತಿನಲ್ಲಿಟ್ಟಿರುವುದರಿಂದ ಹುಬ್ಬಳ್ಳಿ-ಧಾರವಾಡ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘಗಳು ಪ್ರತಿಭಟಿಸಿ ದಿನಾಂಕ ೨೯-೩-೯೦ ಹಾಗೂ ೩೦-೩-೯೦ ರಂದು ಜರುಗಲಿರುವ ಮರುಪರೀಕ್ಷೆಯನ್ನು ಬಹಿಷ್ಕರಿಸಲು ನಿರ್ಧರಿಸಿದ್ದಾರೆಂದು ತಿಳಿದಿದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲು ಕೋರಿದ್ದಾರೆಂದು ತಿಳಿದಿದೆ. ಅವರು ಪರೀಕ್ಷೆಯನ್ನು ಬಹಿಷ್ಕರಿಸುವುದರಿಂದ ಪರೀಕ್ಷೆಗೆ ಕೂಡುವ ಸಾವಿರಾರು ಮಕ್ಕಳಿಗೆ ತೊಂದರೆಯಾಗುತ್ತದೆ. ಪ್ರಶ್ನೆ ಪತ್ರಿಕೆಗಳು ಬಹಿರಂಗಗೊಳ್ಳಲಿಕ್ಕೆ ಸಂಬಂಧಿಸಿದ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಲು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಹಾಗೂ ಪ್ರೌಢಶಾಲಾ ಸಹ ಶಿಕ್ಷಕರ ಸಂಘಗಳು ಸರ್ಕಾರವನ್ನು ಕೇಳಿಕ್ಕಾರೆಂದು ತಿಳಿದು ಬಂದಿದೆ. ಈ ವಿಷಯವು ಸಾರ್ವಜನಿಕ ಮಹತ್ವದಿದ್ದು ಇದರ ಬಗ್ಗೆ ಮಾನ್ಯ ಶಿಕ್ಷಣ ಸಚಿವರ ಗಮನವನ್ನು ಸೆಳೆಯಲಾಗಿದೆ.

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ ಸಚಿವರು) —ಮಾನ್ಯ ಅಧ್ಯಕ್ಷರೇ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಜಿಲ್ಲಾಮಟ್ಟದ ೭ನೇ ತರಗತಿಯ ವಾರ್ಷಿಕ ಪರೀಕ್ಷೆಯನ್ನು ನಡೆಸಲಾಗುತ್ತಿದೆ. ಈ ಪರೀಕ್ಷೆ